# ಕಲಿಯುಗದ ಸೀತೆ — ಶ್ರೀಶಾರದಾಮಾತೆ!

❑ ಸ್ವಾಮಿ ಪುರುಷೋತ್ತಮಾನಂದ

**ಬೆಳಗಾವಿಯಲ್ಲಿರುವ ರಾಮಕೃಷ್ಣ ಮಿಷನ್ ಆಶ್ರಮದ ಅಧ್ಯಕ್ಷರಾಗಿರುವ ಪೂಜ್ಯ ಪುರುಷೋತ್ತಮಾನಂದಜಿಯವರು ಶ್ರೀಮಾತೆಯವರು ಸೀತಾದೇವಿಯ ಅವತಾರ ಎಂಬುದನ್ನು ಸ್ವಾರಸ್ಯಕರವಾಗಿ ವಿವರಿಸಿದ್ದಾರೆ. ಪೂಜ್ಯ ಸ್ವಾಮೀಜಿಯವರು ಹಲವಾರು ಕೃತಿಗಳನ್ನು ರಚಿಸಿರುವುದು ಮಾತ್ರವಲ್ಲದೆ ಶ್ರೇಷ್ಠ ಗಾಯಕರೂ ಆಗಿದ್ದಾರೆ.**

ಶ್ರೀಮಾತೆ ಶಾರದಾದೇವಿಯವರ ಕ್ಷಮೆ ಅನಂತವಾದುದು. ಅವರ ಸಹನೆ ಅಸೀಮವಾದುದು. ಅವರ ಪವಿತ್ರ ಜೀವನವನ್ನು ಅಧ್ಯಯನ ಮಾಡಿದಂತೆಲ್ಲ ನಮಗೆ ಅವರ ಮೇರೆಯರಿಯದ ಕ್ಷಮಾಶೀಲತೆಯ ಪರಿಚಯವಾಗುತ್ತದೆ. "ನ ಕಶ್ಚಿನ್ನಾಪರಾಧ್ಯತಿ"— "ಯಾವುದೇ ತಪ್ಪನ್ನೂ ಮಾಡದವರು ಯಾರೂ ಇಲ್ಲವಷ್ಟೆ," ಎಂದು ನುಡಿದ ಸೀತಾದೇವಿಯೇ ಮತ್ತೊಮ್ಮೆ ಮೈದಳೆದು ಬಂದಂತಿದೆ ಶ್ರೀಮಾತೆಯವರ ತಿತಿಕ್ಷಾಮಯ ಜೀವನ! ಅಲ್ಲದೆ ಸೀತಾಮಾತೆಯು ಶ್ರೀರಾಮನಲ್ಲಿನ ಪ್ರೀತಿ-ಭಕ್ತಿಗಳ ಬಲದಿಂದ ತನ್ನೆಲ್ಲ ಪ್ರಾಣಗಳನ್ನೂ ಹಿಡಿದಿಟ್ಟಿದ್ದಂತೆ ಶ್ರೀಶಾರದಾದೇವಿಯವರೂ ಕೂಡ "ಶ್ರೀರಾಮಕೃಷ್ಣ ಪ್ರಾಣ"ರಾಗಿ ಬಾಳಿದರು. ಅವರ ಪ್ರತಿಯೊಂದು ನಡೆ-ನುಡಿಯೂ ರೀತಿ-ನೀತಿಯೂ ಶ್ರೀರಾಮಕೃಷ್ಣರ ಭಾವಕ್ಕೆ ಪೂರಕವಾಗಿಯೇ ಇರುತ್ತಿತ್ತು, ಶ್ರೀರಾಮಕೃಷ್ಣ ತತ್ತ್ವವನ್ನೇ ಆಧರಿಸಿಕೊಂಡಿತ್ತದು—ರಾಮಮಯ ಜೀವಿತೆ ಸೀತೆಯಂತೆ! ಆದ್ದರಿಂದ ಶ್ರೀಶಾರದಾದೇವಿಯವರನ್ನು "ಪರಮಪಾವನ ಹೃದಯೆ ಕಲಿಯುಗದ ಸೀತೆ" ಎಂದೇ ಕೊಂಡಾಡಲಾಗಿದೆ.

ಶ್ರೀಮಾತೆ ಶಾರದಾದೇವಿಯವರಲ್ಲಿ ಸೀತಾಮಾತೆಯ ಭಾವ ಘನೀಭೂತವಾಗಿ ವ್ಯಕ್ತಗೊಂಡ ಸಂದರ್ಭಗಳಿವೆ. ಅವರನ್ನು ಕಂಡಾಗ ಇತರರಿಗೆ ಸೀತೆಯನ್ನೇ ಕಂಡಂತೆ ಭಾಸವಾದ ಸನ್ನಿವೇಶಗಳಿವೆ. ಇವುಗಳನ್ನು ಪ್ರತ್ಯೇಕವಾಗಿ ಪರಾಂಬರಿಸಿದಾಗ ನಮಗೆ ಶ್ರೀಮಾತೆಯವರ ನಿಜ ವ್ಯಕ್ತಿತ್ವದ ಇಣುಕು ನೋಟ ಕಾಣಸಿಗುತ್ತದೆ, ಮತ್ತು ಆ ಕವಿವಾಣಿಯ ತಥ್ಯ ಮನವರಿಕೆಯಾಗುತ್ತದೆ.

ಶ್ರೀಮಾತೆಯವರು ದಕ್ಷಿಣ ದೇಶದ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತ ರಾಮೇಶ್ವರ ಕ್ಷೇತ್ರಕ್ಕೆ ಆಗಮಿಸಿದಾಗ ಅಲ್ಲಿ ನಡೆದ ಘಟನೆಯೊಂದು ಅವರ ನಿಜಸ್ವರೂಪವನ್ನು ಹೊರಗೆಡವುತ್ತದೆ. ಅಂದಿನ ದಿನಗಳಲ್ಲಿ ಪಾಂಬನ್ ದ್ವೀಪ ಹಾಗೂ ರಾಮೇಶ್ವರ ದೇವಾಲಯಗಳೆರಡೂ ರಾಮನಾಡು ಪ್ರಾಂತದ ರಾಜ ಭಾಸ್ಕರ ಸೇತುಪತಿಯ ಅಧೀನದಲ್ಲಿದ್ದವು. ಈ ರಾಜ ಸ್ವಾಮಿ ವಿವೇಕಾನಂದರ ಶಿಷ್ಯ; ಅವರ ಕಟ್ಟಾ ಅಭಿಮಾನಿ. ಇವನು ರಾಮೇಶ್ವರ ದೇವಾಲಯದ ಅಧಿಕಾರಿಗಳಿಗೆ "ನನ್ನ ಗುರುವಿನ ಗುರು—ಪರಮಗುರು — ದೇವಸ್ಥಾನಕ್ಕೆ ಬರುತ್ತಿದ್ದಾರೆ. ಅವರಿಗೆ ಸಕಲ ಸೌಕರ್ಯಗಳನ್ನೂ ಒದಗಿಸಿಕೊಡಿ" ಎಂದು ತಂತಿ ಕಳಿಸಿದ್ದ. ತತ್ಪರಿಣಾಮವಾಗಿ, ಪುರೋಹಿತರಿಗಲ್ಲದೆ ಇತರರಾರಿಗೂ ಪ್ರವೇಶವಿಲ್ಲದಿದ್ದ ಆ ಗರ್ಭಗುಡಿಯೊಳಗೆ ಶ್ರೀಮಾತೆಯವರಿಗೂ ಅವರ ಸಂಗಡಿಗರಿಗೂ ಪ್ರವೇಶ ದೊರೆಯಿತು. ದೇವಾಲಯದ ಪಾರುಪತ್ಯ



ಗಾರರು ಅವರನ್ನೆಲ್ಲ ಆದರದಿಂದ ಒಳಕ್ಕೆ ಕರೆದೊಯ್ದು ಶಿವಲಿಂಗದ ಮೇಲಿನ ಕನಕಾವರಣವನ್ನು ತೆರೆದರು. ಆಹ್! ಅದೆಂಥ ದೃಶ್ಯ...! ಆ ಅನಾಚ್ಛಾದಿತ ಶಿವಲಿಂಗವನ್ನು ಕಂಡೊಡನೆ ಶ್ರೀಮಾತೆಯವರ ಬಾಯಿಂದ ಅಪ್ರಯತ್ನವಾಗಿ ಒಂದು ಉದ್ಗಾರ ಹೊಮ್ಮಿತು: "ನಾನು ಹಿಂದೆ ಹೇಗೆ ಬಿಟ್ಟುಹೋಗಿದ್ದೆನೋ ಈಗಲೂ ಹಾಗೇ ಇದೆ." ಸಮೀಪದಲ್ಲೇ ನಿಂತಿದ್ದ ಸ್ವಾಮಿ ಧೀರಾನಂದರಿಗೂ ಇತರ ಭಕ್ತರಿಗೂ ಇದು ಕೇಳಿಸಿಬಿಟ್ಟಿತು. ಕೂಡಲೇ ಅವರು ಕುತೂಹಲದಿಂದ, "ಆ್ಞ! ಏನೆಂದಿರಿ ತಾಯಿ?" ಎಂದು ಕೇಳಿದರು. ಆದರೆ ಅಷ್ಟರಲ್ಲೇ ಶ್ರೀಮಾತೆಯವರು ಮೈತಿಳಿದು ನಗುಮೊಗದಿಂದ, "ಏನಿಲ್ಲ; ಏನೋ ಅರ್ಥವಿಲ್ಲದ ಮಾತೊಂದು ಹೊರಬಂತು ಅಷ್ಟೆ" ಎಂದು ಮಾತು ತೇಲಿಸಿಬಿಟ್ಟರು.

ಆವತ್ತಿಗೆ ಆ ವಿಷಯ ಅಲ್ಲಿಗೆ ನಿಂತಿತು. ಆದರೆ ಮುಂದೆ ಅವರು ಕಲ್ಕತ್ತಕ್ಕೆ ಹಿಂದಿರುಗಿದ ಬಳಿಕ ಕೋಯಾಲಪಾರಾದ ಭಕ್ತ

ಕೇದಾರನಾಥ ಒಮ್ಮೆ ಮಾತಿನ ಸಂದರ್ಭದಲ್ಲಿ, "ಅಮ್ಮ, ರಾಮೇಶ್ವರನನ್ನು ನೋಡಿ ನಿಮಗೇನೆನ್ನಿಸಿತು?" ಎಂದು ಕೇಳಿದ. ಅದಕ್ಕೆ ಶ್ರೀಮಾತೆಯವರು ಒಂದು ಬಗೆಯ ಉತ್ಸಾಹದಿಂದ, "ಮಗು, ಅವನು, ಹಿಂದೆ ನಾನು ಹೇಗೆ ಇಟ್ಟಿದ್ದೆನೋ ತದ್ವತ್ ಹಾಗೆಯೇ ಇದ್ದಾನೆ" ಎಂದುತ್ತರಿಸಿದರು. ಆ ಸಮಯಕ್ಕೆ ಸರಿಯಾಗಿ ಪಕ್ಕದ ಜಗುಲಿಯ ಮೂಲಕ ಹಾದುಹೋಗುತ್ತಿದ್ದ ಗೋಲಾಪ್ ಮಾಳ ಚುರುಕು ಕಿವಿಯ ಮೇಲೆ ಬಿತ್ತು ಈ ಮಾತು. ಈಗ ಅವಳು ಅಲ್ಲೇ ನಿಂತು ಉತ್ಸುಕಳಾಗಿ, "ಏನಮ್ಮ, ಏನೆಂದಿರಿ ನೀವು?" ಎಂದು ಕೇಳಿದಳು. ಶ್ರೀಮಾತೆಯವರು ಚಕಿತರಾದರು. ಆದರೂ ಅದನ್ನು ತೋರಗೊಡದೆ ಕೂಡಲೇ ಸಾವರಿಸಿಕೊಂಡು ನುಡಿದರು: "ಎಲ್ಲಿ, ಇನ್ನೇನು ಅಂದೆ ನಾನು? ನೀವೆಲ್ಲ ರಾಮೇಶ್ವರನನ್ನು ಹೇಗೆ ವರ್ಣಿಸಿದ್ದಿರೋ ಅದು ಹಾಗೇ ಇರುವುದನ್ನು ಕಂಡು ಬಹಳ ಆನಂದವಾಯಿತು ಅಂದೆ." ಆದರೆ ಗೋಲಾಪ್ ಮಾ ಅಷ್ಟು ಸುಲಭದಲ್ಲಿ ಸುಮ್ಮನಾಗುವವಳಲ್ಲ. "ಇಲ್ಲ, ತಾಯಿ, ನಾನೆಲ್ಲ ಸರಿಯಾಗಿ ಕೇಳಿಸಿಕೊಂಡೆ. ಈಗ ನೀವು ಮಾತು ಬದಲಾಯಿಸು ವುದು ಸರಿಯಲ್ಲ. ಕೇದಾರನೇ ಅದಕ್ಕೆ ಸಾಕ್ಷಿಯಾಗಿದ್ದಾನೆ. ಏನೆನ್ನುತ್ತೀ ಕೇದಾರ್? ಹೌದೋ ಅಲ್ಲವೋ?" ಎನ್ನುತ್ತ ಗೋಲಾಪ್ ಮಾ ಎಲ್ಲರಿಗೂ ಈ ಸಂಗತಿಯನ್ನು ತಿಳಿಸುವ ಉತ್ಸಾಹದಿಂದ ನಡೆದೇಬಿಟ್ಟಳು.

ರಾಮೇಶ್ವರ ಶಿವನ ದರ್ಶನಮಾಡಿದಾಗ ಶ್ರೀಮಾತೆಯವರು ತಮಗೇ ಅರಿವಿಲ್ಲದಂತೆ, "ನಾನು ಹಿಂದೆ ಹೇಗೆ ಇಟ್ಟಿದ್ದೆನೋ ಈಗಲೂ ಹಾಗೆಯೇ ಇದ್ದಾನೆ" ಎಂದು ಉದ್ಗರಿಸಿದ್ದು ನಿಜಕ್ಕೂ ಬಹಳ ಅದ್ಭುತವಾದ ಹೇಳಿಕೆ. ಯಾವ ಆದ್ಯಾಶಕ್ತಿಯು ಹಿಂದೆ ತ್ರೇತಾಯುಗದಲ್ಲಿ ಶ್ರೀರಾಮಚಂದ್ರನ ಸಹಧರ್ಮಿಣಿಯಾಗಿ ಅವತರಿಸಿ ಸಮುದ್ರತೀರದ ರಾಮೇಶ್ವರದಲ್ಲಿ ಪುಲಿನನಿರ್ಮಿತ ಶಿವಲಿಂಗವನ್ನು ಪೂಜಿಸಿದಳೋ, ಅವಳೇ ಇಂದು ಕ್ಷಮಾಮೂರ್ತಿ, ಕರುಣಾಮಯಿ ಶ್ರೀಶಾರದಾದೇವಿಯಾಗಿ ಅವತರಿಸಿದ್ದಾಳೆ. ಆದ್ದರಿಂದಲೇ ಆ ಅನಾಚ್ಛಾದಿತ ಶಿವಲಿಂಗವನ್ನು ಕಂಡೊಡನೆ ಅವರಿಗರಿವಿಲ್ಲದೆಯೇ ಅವರ ಮನಸ್ಸು ಸಾವಿರಾರು ವರ್ಷಗಳ ಹಿಂದಕ್ಕೆ ಸರಿಯಿತು. ಆ ಭೂತಕಾಲ ಪುನಃ ವರ್ತಮಾನಕಾಲ ವಾಯಿತು. ಹೀಗೆ ಅವರು ತಮ್ಮ ಪರಿಸರವನ್ನೇ ಮರೆತಾಗ ಅವರ ಬಾಯಿಂದ ಆ ಅನುಭವದ ನುಡಿ ತಾನೇ ತಾನಾಗಿ ಹೊರಬಂತು. ಅವರ ಆ ದಿವ್ಯ ನುಡಿಯಿಂದ ನಮಗೆ ಸ್ಪಷ್ಟವಾಗುತ್ತದೆ, ಶ್ರೀರಾಮನ ಪತ್ನಿಯಾದ ಸೀತಾಮಾತೆಯೇ ಇಂದು ಶ್ರೀಶಾರದಾಮಾತೆಯಾಗಿ ಅವತರಿಸಿದ್ದಾಳೆ ಎಂದು. ಹಿಂದೆ ಶ್ರೀರಾಮಕೃಷ್ಣರು ರುಗ್ಣಶಯ್ಯೆ ಯಲ್ಲಿದ್ದಾಗ ನರೇಂದ್ರನ ಸಂಶಯವನ್ನು ಹೋಗಲಾಡಿಸಲು ಒಂದು ಅಪೂರ್ವ ಘೋಷಣೆಯನ್ನು ಮಾಡಿದ್ದರು: "ಯಾರು ಹಿಂದೆ ರಾಮ ನಾಗಿ ಅವತರಿಸಿದ್ದನೋ, ಯಾರು ಹಿಂದೆ ಕೃಷ್ಣನಾಗಿ ಅವತರಿಸಿ ದ್ದನೋ, ಅವನೇ ಇಂದು ಇಲ್ಲಿ ರಾಮಕೃಷ್ಣನಾಗಿ ಅವತರಿಸಿದ್ದಾನೆ" ಎಂದು. ಹಾಗೆಯೇ ಇಂದು ನಾವು ಶ್ರೀಮಾತೆ ಶಾರದಾದೇವಿಯವರ ಸಂಬಂಧವಾಗಿಯೂ ಮನಗಾಣಬೇಕಾಗಿದೆ, "ಯಾರು ಹಿಂದೆ ಸೀತೆಯಾಗಿ ಅವತರಿಸಿದ್ದಳೋ, ಯಾರು ಹಿಂದೆ ರುಕ್ಮಿಣಿಯಾಗಿ ಅವತರಿಸಿದ್ದಳೋ, ಅವಳೇ ಇಂದು ಶಾರದಾದೇವಿಯಾಗಿ ಅವತರಿಸಿದ್ದಾಳೆ" ಎಂದು.

ಈ ಮೇಲಿನ ಘಟನೆಯು, ಶ್ರೀಮಾತೆಯವರು ತಾವಾಗಿಯೇ ತಮ್ಮ ನಿಜಸ್ವರೂಪದ ಕುರುಹನ್ನು ನೀಡಿದ ಪ್ರಸಂಗವಾದರೆ ಇತರರು ಅವರ ದಿವ್ಯತೆಯ ಪ್ರಕಾಶವನ್ನು ಕಂಡ ಪ್ರಸಂಗಗಳು ಅದೆಷ್ಟೋ! ಮತ್ತೂ ಸ್ವಾರಸ್ಯದ ಅಂಶವೆಂದರೆ, ಕೆಲವೊಮ್ಮೆ ಶ್ರೀಮಾತೆಯವರ ಬಂಧುಪರಿವಾರದ ಪುಟ್ಟ ಮಕ್ಕಳು ಅವರ ಮಹತ್ತನ್ನು ಗುರುತು ಹಿಡಿದ ಉದಾಹರಣೆಗಳೂ ಇವೆ! ನಿಷ್ಕಳಂಕ ರಾದ ಮುಗ್ಧ ಹೃದಯಿಗಳಿಗೆ ಸಹಜವಾದ ಅಂತರ್ದೃಷ್ಟಿಯಿಂದ ಅವರು ಶ್ರೀಮಾತೆಯವರ ದೇವೀ ಸ್ವರೂಪವನ್ನು ಪತ್ತೆಹಚ್ಚಿ ಬಿಡುತ್ತಿದ್ದರು. ಇಂತಹ ಕಿಶೋರರಲ್ಲಿ ನ್ಯಾಡ ಎಂಬುವನೂ ಒಬ್ಬ. ಇವನು ಶ್ರೀಮಾತೆಯವರ ತಮ್ಮ ಪ್ರಸನ್ನಕುಮಾರನ ಮೊಮ್ಮಗ. ಯಾವುದೋ ಕಾಯಿಲೆಗೆ ತುತ್ತಾಗಿ ಇವನು ಎಳೆತನದಲ್ಲೇ ಅಸು ನೀಗಿದ. ಆದರೆ ಅವನು ಶ್ರೀಮಾತೆಯವರ ವಿಶೇಷ ಪ್ರೀತಿ ವಾತ್ಸಲ್ಯಗಳಿಗೆ ಪಾತ್ರನಾಗಿದ್ದ ಹುಡುಗ. ಆದ್ದರಿಂದ ನ್ಯಾಡ ತೀರಿಹೋದ ಮೇಲೆ ಅನೇಕ ದಿನಗಳವರೆಗೂ ದುಃಖದಿಂದ ಶ್ರೀಮಾತೆಯವರ ಕಣ್ಣುಗಳು ಒದ್ದೆಯಾಗಿಯೇ ಇರುತ್ತಿದ್ದವು. ಅವನಿನ್ನೂ ಎರಡೂವರೆ-ಮೂರು ವರ್ಷದ ಬಾಲಕನಾದರೂ ಅವನಲ್ಲಿ ಆದಾಗಲೇ ಹಲವಾರು ಸದ್ಗುಣಗಳು ವ್ಯಕ್ತಗೊಂಡಿದ್ದವು. ಶ್ರೀಮಾತೆಯವರು ಅವುಗಳನ್ನು ನೆನಪಿಸಿಕೊಳ್ಳುತ್ತಾ ಅವನ ಗುಣಗಾನ ಮಾಡುತ್ತಿದ್ದರು. ಒಂದು ದಿನ ಅವರು ಹೇಳುತ್ತಾರೆ:

"ಈ ಹುಡುಗ ಹಿಂದಿನ ಜನ್ಮದಲ್ಲಿ ಒಬ್ಬ ಯೋಗಿ ಯಾಗಿದ್ದಿರಬೇಕು, ಅಥವಾ ಒಬ್ಬ ಮಹಾಪುರುಷನಾಗಿದ್ದಿರಬೇಕು. ಏನೋ ಸ್ವಲ್ಪ ಪ್ರಾರಬ್ಧ ಉಳಿದಿತ್ತು, ಅದಕ್ಕೇ ಹುಟ್ಟಿಬಂದಿದ್ದ. ಅದೂ ಈಗ ಮುಗಿದುಹೋಯಿತು. ಇದೇ ಅವನಿಗೆ ಕೊನೆಯ ಜನ್ಮ. ಅವನಂಥ ಸಣ್ಣ ವಯಸ್ಸಿನ ಹುಡುಗರಲ್ಲಿ ಅಷ್ಟೊಂದು ಸದ್ಗುಣಗಳಿರಲು ಸಾಧ್ಯವಿಲ್ಲ. ಅವನು ಪ್ರತಿದಿನ ಎಲ್ಲಿಂದಲೋ ಒಂದಿಷ್ಟು ಕೆಂಡಸಂಪಿಗೆ ಹೂಗಳನ್ನು ಕಿತ್ತುಕೊಂಡು ಬಂದು ನನ್ನ ಪಾದಗಳನ್ನು ಪೂಜಿಸುತ್ತಿದ್ದ."

ಹೀಗೆ ಶ್ರೀಮಾತೆಯವರು ಆತನ ಒಂದೊಂದು ನಡೆ-ನುಡಿ ಯನ್ನೂ ನೆನೆಸಿಕೊಳ್ಳುತ್ತಿದ್ದರು. ಅವರು ಆತನ ಕುರಿತಾಗಿ ಆಗಾಗ ಹೇಳುತ್ತಿದ್ದ ಮತ್ತೊಂದು ಮಾತು ಅತ್ಯಂತ ಆಶ್ಚರ್ಯಕರವಾಗಿದೆ. "ಅವನು ನನ್ನನ್ನು 'ಸೀತೆ' ಎಂದು ಕರೆಯುತ್ತಿದ್ದ" ಎನ್ನುತ್ತಾರೆ ಶ್ರೀಮಾತೆಯವರು. ಇದೆಂಥ ಅದ್ಭುತ! ಮೂರುವರ್ಷದ ಬಾಲಕ ಶ್ರೀಮಾತೆಯವರಲ್ಲಿ ಸೀತೆಯನ್ನು ಗುರುತಿಸಿದ್ದನಂತೆ! ಆದರೆ ಅವನು ಅದನ್ನು ಇತರರಿಂದ ಕಲಿತು ಸಂಬೋಧಿಸಿದ್ದಲ್ಲ. ಏಕೆಂದರೆ ಮನೆಯ ಸ್ತ್ರೀಪರಿವಾರದವರಿಗೆಲ್ಲ ಶ್ರೀಮಾತೆಯವರು ಒಬ್ಬ ಅತ್ತೆಯೇ ಹೊರತು ಸೀತೆಯಲ್ಲ. ಅಲ್ಲದೆ ಅವನು, 'ಸೀತೆ' ಎಂದು ಕರೆಯುತ್ತಿದ್ದುದು ಬಾಲಸಹಜ ವಿಕಲ್ಪವಾಗಿರಲೂ ಸಾಧ್ಯವಿಲ್ಲ. ಏಕೆಂದರೆ ಅದನ್ನು ಶ್ರೀಮಾತೆಯವರು ಪರಿಗಣಿಸಿ ನೆನಪಿಟ್ಟು

ಕೊಂಡಿದ್ದರಲ್ಲದೆ ಇತರರ ಮುಂದೆ ಅದನ್ನು ಆಗಾಗ ಸ್ಮರಿಸಿಕೊಂಡು ಆ ಶಿಶುವನ್ನು ಕೊಂಡಾಡಬೇಕಾದರೆ, ಅದು ನಿಜಕ್ಕೂ ಆ ಮಗುವಿನ ಅಂತರ್ದೃಷ್ಟಿಗೆ ಗೋಚರಿಸಿದ ಪ್ರಾಮಾಣಿಕ ಅನಿಸಿಕೆಯೇ ಆಗಿದ್ದಿರಬೇಕು. ಅಲ್ಲದೆ ಶ್ರೀಮಾತೆಯವರು ತಮ್ಮ ಕುರಿತಾಗಿ ಇತರರು ಅತಿಶಯ ಭಕ್ತಿ ತೋರುವುದು, ಸ್ತೋತ್ರ ಮಾಡುವುದು—ಇವುಗಳನ್ನೆಲ್ಲ ಇಷ್ಟಪಡುತ್ತಿರಲಿಲ್ಲ. ಏಕೆಂದರೆ ಅವರು ಅಂತರಂಗದ ಭಾವವನ್ನು ನೋಡುವವರು; ವಿವೇಕಪೂರ್ಣ ನಡತೆಯನ್ನು ಪುರಸ್ಕರಿಸುವವರು. ಒಮ್ಮೆಯಂತೂ ಒಬ್ಬ ಹಿರಿಯ ಭಕ್ತೆ ತಮ್ಮನ್ನು 'ಜಗದಂಬೆ' ಎಂದು ಸಂಬೋಧಿಸಿದಾಗ ಅವಳಿಗೆ ಕಟುವಾಗಿ ಬುದ್ಧಿಹೇಳಿ ಸುಮ್ಮನಿರಿಸಿದರು. ಆದ್ದರಿಂದ ನ್ಯಾಡ ಶ್ರೀಮಾತೆಯವರನ್ನು 'ಸೀತೆ' ಎಂದು ಕರೆದದ್ದು ಅವನ ಶುದ್ಧಹೃದಯದಿಂದ ಹೊಮ್ಮಿದ ಸತ್ಯಭಾವನೆಯೆಂದೇ ನಾವು ತಿಳಿಯಬೇಕಾಗುತ್ತದೆ. ಇವೆಲ್ಲಕ್ಕೂ ಮಿಗಿಲಾಗಿ ಅವನೊಬ್ಬ ಸಾಮಾನ್ಯ ಹಸುಳೆಯಲ್ಲ, ಜನ್ಮಾಂತರದ ಯೋಗಿ ಎಂಬುದಾಗಿ ಶ್ರೀಮಾತೆಯವರೇ ಬಯಲುಪಡಿಸುತ್ತಾರೆ. ಆ ಮಾತಿಗೆ ಇಂಬುಗೊಡುವಂತೆ ಅವನೂ ಕೂಡ ಅವರ ಶ್ರೀಚರಣಗಳನ್ನು ಪ್ರತಿನಿತ್ಯವೂ ಕೆಂಡಸಂಪಿಗೆ ಹೂವಿನಿಂದ ಪೂಜಿಸುತ್ತಿದ್ದನಂತೆ!

ಹೀಗೆ, ಪುಟ್ಟ ಮಗು ನ್ಯಾಡ ಶ್ರೀಮಾತೆಯವರನ್ನು ಸೀತಾದೇವಿಯೆಂದು ಗುರುತಿಸಿದ್ದು ಒಂದು ವಿಶೇಷವಾದರೆ, ಇನ್ನು, ಅವರ ಪತಿದೇವರಾದ ಶ್ರೀರಾಮಕೃಷ್ಣರು ಅವರ ಸೀತಾದೇವಿಯ ಭಾವಕ್ಕೆ ಪ್ರತಿಸ್ಪಂದಿಸಿದ ಬಗೆ ಅಪೂರ್ವವಾಗಿದೆ.

ಶ್ರೀರಾಮಕೃಷ್ಣರು ಹನುಮದ್ಭಾವದಲ್ಲಿ ಸಾಧನೆ ಮಾಡುತ್ತಿದ್ದಾಗ ಬರಿಗಣ್ಣಿನಿಂದ ಸೀತಾದೇವಿಯನ್ನು ದರ್ಶಿಸಿದ್ದರು. ಆ ದರ್ಶನವು ಅವರ ಇಡೀ ವ್ಯಕ್ತಿತ್ವದ ಮೇಲೆಯೇ ಒಂದು ವಿಶೇಷ ಪ್ರಭಾವವನ್ನು ಬೀರಿತು. ಆ ದರ್ಶನದ ಅವಧಿಯಲ್ಲಿ ಅವರು ಸೀತಾಮಾತೆ ತೊಟ್ಟಿದ್ದ ವಜ್ರಖಚಿತ ಬಳೆಗಳ ವಿನ್ಯಾಸವನ್ನು ಗಮನಿಸಿದ್ದರು. ಅವು ಸುರುಳಿಸುತ್ತಿಕೊಂಡಂತಿರುವ ಬಳೆಗಳು. ಅವಕ್ಕೆ "ಅನಂತ ಬಳೆ" ಎಂದು ಹೆಸರು. ಮುಂದೆ ಅವರು ಅದೇ ಮಾದರಿಯ ಬಳೆಗಳನ್ನೇ ತಮ್ಮ ಪತ್ನಿಗೆ ಮಾಡಿಸಿಕೊಟ್ಟರು. ಶಾರದಾದೇವಿಯವರು ಅವನ್ನು ತಮ್ಮ ಜೀವಿತದ ಕಡೆಯವರೆಗೂ ತೊಟ್ಟುಕೊಂಡಿದ್ದರು.

ಮೇಲ್ನೋಟಕ್ಕೆ ಇದೊಂದು ಸಾಮಾನ್ಯ ಘಟನೆಯಿರಬಹುದು. ಆದರೆ, ಧನ-ಕನಕ, ಚಿನ್ನಾಭರಣಗಳ ವಿಷಯದಲ್ಲಿ ಅತ್ಯಂತ ವಿರಕ್ತರಾಗಿದ್ದ ಶ್ರೀರಾಮಕೃಷ್ಣರು, ಸೀತಾದೇವಿಯು ದರ್ಶನವಿತ್ತಾಗ ಅವಳ ಕರಗಳಲ್ಲಿನ ಬಳೆಯನ್ನು ವಿವರಪೂರ್ಣವಾಗಿ ಗಮನಿಸಿ ನೆನಪಿಟ್ಟುಕೊಂಡದ್ದೇ ಒಂದು ದೊಡ್ಡ ಆಶ್ಚರ್ಯ. ಅಲ್ಲದೆ, ಅವರಿಗಾಗುತ್ತಿದ್ದ ದೇವದೇವಿಯರ ದರ್ಶನಗಳಿಗೋ ಲೆಕ್ಕವೇ ಇಲ್ಲ; ಅಂಥದರಲ್ಲಿ ಅವರು ಸೀತೆ ತೊಟ್ಟಿದ್ದ ಬಳೆಗಳ ತೆರನಾದವುಗಳನ್ನೇ ತಮ್ಮ ಸತಿಗೆ ಮಾಡಿಸಿ ಹಾಕಬೇಕಾದರೆ ಅದರ ಹಿಂದೆ ಒಂದು ಮಹತ್ವಪೂರ್ಣವಾದ ಉದ್ದೇಶವಿರಬೇಕು. ಅಲ್ಲದೆ ತನ್ಮೂಲಕ "ತ್ರೇತಾಯುಗದಲ್ಲಿ ತಮ್ಮೊಂದಿಗೆ ಸೀತೆಯಾಗಿ ಅವತರಿಸಿದ ಆದ್ಯಾಶಕ್ತಿಯೇ ಈ ಕಲಿಯುಗದಲ್ಲಿ ಶಾರದಾದೇವಿಯಾಗಿ ಬಂದಿದ್ದಾಳೆ" ಎಂಬುದನ್ನು ಅವರು ಸೂಚ್ಯವಾಗಿ ತಿಳಿಸಿದ ಸಂದರ್ಭ ಅದಾಗಿರಬೇಕು.

ಶ್ರೀಮಾತೆ ಶಾರದಾದೇವಿಯವರು ಕಲಿಯುಗದ ಸೀತೆಯೇ ನಿಜ ಎಂಬುದನ್ನು ಸಾರುವ ಮತ್ತೊಂದು ಪ್ರಸಂಗ ರೋಮಾಂಚಕವಾಗಿದೆ. ಈವರೆಗೆ ನಾವು ಪರಾಂಬರಿಸಿದ ಘಟನೆಗಳನ್ನೆಲ್ಲ ದೃಢೀಕರಿಸುವ ಪ್ರಸಂಗವದು. ಒಮ್ಮೆ ಕಲ್ಕತ್ತಕ್ಕೆ ಹೊರಟಿದ್ದ ಶ್ರೀಮಾತೆಯವರು ತಮ್ಮ ಪರಿವಾರದೊಂದಿಗೆ ವಿಷ್ಣುಪುರದ ರೈಲುನಿಲ್ದಾಣದಲ್ಲಿ ಕಾಯುತ್ತ ಕುಳಿತಿದ್ದರು. ಆ ಸಮಯದಲ್ಲಿ ಅಲ್ಲಿಗೊಬ್ಬ ವ್ಯಕ್ತಿ ಓಡಿಬಂದ. ನೋಡಿದರೆ.... ಕೂಲಿಯವನು. ಅವನು ಯಾರೋ ಏನೋ ಒಬ್ಬರಿಗೂ ತಿಳಿಯದು. ಅಲ್ಲದೆ, ಆತ ಬಂಗಾಳದವನಲ್ಲ, ಪಶ್ಚಿಮ ಭಾರತದ ಕಡೆಯವನು. ಶ್ರೀಮಾತೆಯವರನ್ನು ಕಂಡು ಅವನೊಳಗೆ ಎಂತಹ ಭಾವಪ್ರಚೋದನೆಯಾಯಿತೋ ಏನೋ, ಆತ ನೇರವಾಗಿ ಅವರ ಬಳಿಗೇ ಬಂದು ಭಕ್ತ್ಯಾವೇಶದಿಂದ, "ಅಮ್ಮ, ನೀವು ನನ್ನ ಜಾನಕೀಮಾತೆ! ನಿಮಗಾಗಿ ನಾನು ಎಷ್ಟೋ ದಿನಗಳಿಂದ ಹುಡುಕುತ್ತಿದ್ದೆ. ನೀವೆಲ್ಲಿದ್ದಿರಿ ತಾಯಿ ಇಷ್ಟು ದಿನ?" ಎನ್ನುತ್ತ ಅಳುವುದಕ್ಕೇ ಶುರುಮಾಡಿದ. ಯಾವನೋ ಅಪರಿಚಿತ ವ್ಯಕ್ತಿ, ಅದರಲ್ಲೂ ಅವಿದ್ಯಾವಂತ ಕೂಲಿಯವನೊಬ್ಬ, ಹೀಗೆ ವರ್ತಿಸುತ್ತಿರುವುದನ್ನು ಕಂಡು ಅಲ್ಲಿದ್ದವರೆಲ್ಲ ಬೆಕ್ಕಸಬೆರಗಾದರು. ಆದರೆ, ಕೃಪಾಮಯಿಯಾದ ಶ್ರೀಮಾತೆಯವರು ಮಾತ್ರ ಚಕಿತರಾಗಲಿಲ್ಲ, ಬದಲಾಗಿ ಒಮ್ಮೆಗೇ ಅವರು ಅವನ ಭಾವವನ್ನು ಅರ್ಥಮಾಡಿಕೊಂಡರು. ಅವನನ್ನು ಅವರು ಕರುಣೆಯಿಂದ ಸಮಾಧಾನಪಡಿಸುತ್ತ, "ಹೋಗಿ ಒಂದು ಹೂವನ್ನು ತೆಗೆದುಕೊಂಡು ಬಾಪ್ಪ" ಎಂದರು. ಆತ ಹೂವನ್ನು ತಂದು ಅವರ ಶ್ರೀಚರಣಗಳಿಗೆ ಸಮರ್ಪಿಸಿದ. ಆಗ ಅವರು ಅಲ್ಲೇ ಅವನಿಗೆ ಮಂತ್ರದೀಕ್ಷೆಯನ್ನು ಕರುಣಿಸಿದರು.

ಆ ಕೂಲಿಯಾಳು ಶ್ರೀಮಾತೆಯವರಲ್ಲಿ ಸೀತಾಮಾತೆಯನ್ನು ಕಂಡುಕೊಂಡದ್ದು ನಿಜಕ್ಕೂ ಒಂದು ಅದ್ಭುತ ಸಂಗತಿ. ಶ್ರೀಮಾತೆಯವರು ಅವನ ಅಂತರಂಗದ ಭಾವವನ್ನು ಗ್ರಹಿಸಿ ಮಂತ್ರದೀಕ್ಷೆಯನ್ನು ಅನುಗ್ರಹಿಸಿ ಸಲಹಿದ್ದು ಇನ್ನೊಂದು ಅದ್ಭುತ! ತಮ್ಮ ನಿಜಸ್ವರೂಪವನ್ನು ಪ್ರಕಾಶಪಡಿಸಿ ಸಾಕ್ಷಾತ್ ಸೀತಾ ಮಾತೆಯಾಗಿ ನಿಂತರು ಶ್ರೀಮಾತೆಯವರು! ತನ್ನ ಜಾನಕೀಮಾತೆಯನ್ನು ದರ್ಶಿಸಿ ಅವಳ ಕೃಪಾಶೀರ್ವಾದ ಹೊಂದಿ ಪುಳಕಿತನಾದ ಆ ಧನ್ಯ ಕೂಲಿಯಾಳು!

> ಜನ ನನ್ನ ಬಳಿಗೆ ಬಂದು "ಅಮ್ಮ, ನನಗೆ ಶಾಂತಿ ಸಿಗುತ್ತಿಲ್ಲ, ನನಗೆ ದೇವರ ದರ್ಶನ ಆಗುತ್ತಿಲ್ಲ, ಶಾಂತಿ ಸಿಗುವುದು ಹೇಗೆ ಅಂತ ತಿಳಿಸಿ" ಎಂದೆಲ್ಲ ಕೇಳಿಕೊಳ್ಳುತ್ತಾರೆ. ಒಂದು ಕ್ಷಣ ಅವರನ್ನು ನನ್ನೊಂದಿಗೆ ಹೋಲಿಸಿಕೊಂಡಾಗ ಅವರೇಕೆ ಹೀಗೆ ಮಾತನಾಡುತ್ತಾರೆ ಎಂದು ನನಗೆ ಆಶ್ಚರ್ಯವಾಗುತ್ತದೆ. ನಾನು ಎಲ್ಲದರಲ್ಲಿಯೂ ಸಾಧಾರಣ ವ್ಯಕ್ತಿಗಳಿಗಿಂತ ಬೇರೆಯೇ? ಅಶಾಂತಿ ಎಂದರೆ ಏನೆಂದು ನನಗೆ ಗೊತ್ತಿಲ್ಲ. ಇನ್ನು ದೇವರೋ, ನನಗೆ ಅಂಗೈಮೇಲಿನ ನೆಲ್ಲಿಕಾಯಿ ಇದ್ದ ಹಾಗೆ. ಬೇಕಾದಾಗಲೆಲ್ಲ ದರ್ಶನ ಮಾಡುತ್ತಲೇ ಇರುತ್ತೇನೆ. —ಶ್ರೀಮಾತೆ ಶಾರದಾದೇವಿ